

## ಶ್ರೀ ಶಿವಕುಮಾರ ಪ್ರಶಸ್ತಿ ಪುರಸ್ಕೃತ : ಜಯಶ್ರೀ  (2011)

ಕುಲ ಕಸುಬಿಗೆ ಕಲಶವಿಟ್ಟ ಕಲಾವಿದೆ

ಕುಲ ಕಸುಬುಗಳು ವಂಶಪಾರಂಪರ್ಯವಾಗಿ ಮುಂದುವರಿಯುವ ಕಾಲ ಇದಲ್ಲ. ನಮ್ಮ ಕುಲ ಕಸುಬು ನಮ್ಗೆ ಸಾಕು. ನಾವು ಹೆಂಗಾರೂ ಇರ್ಲಿ, ನಮ್ಮ ಮಕ್ಕಳು ಸುಖವಾಗಿ ಇರ್ಲಿ ಅಂತ ತಲತಲಾಂತರದಿಂದ ಬಂದ ಕುಲ ಕಸುಬನ್ನ ಬಿಡಿಸಿ ತಮ್ಮ ಮಕ್ಕಳನ್ನು ಆಧುನಿಕ ವೃತ್ತಿಗಳಿಗೆ ಅಥವಾ ಕೊನೆಪಕ್ಷ ಜವಾನ ಹುದ್ದೆಯಾದರೂ ಸರಿ ಸರಕಾರಿ ಕೆಲಸಕ್ಕೇ ಸೇರಬೇಕೆಂದು ಇಂದಿನ ಪೋಷಕರು ಬಯಸುತ್ತಿರುವುದು ಸರ್ವೇಸಾಮಾನ್ಯ. ಇಂಥ ಹೊತ್ತಲ್ಲಿ ಸಂಪೂರ್ಣವಾಗಿ ನೆಲಕಚ್ಚಿದ ವೃತ್ತಿಯನ್ನೇ ಮೆಟ್ಟಿಲುಗಳನ್ನಾಗಿಸಿಕೊಂಡು ಸಾಧನೆಯ ಶಿಖರಕ್ಕೇರಬಹುದೆನ್ನುವುದು ಇಂದಿನವರಿಗೆ ಕೇವಲ ಕನಸಾಗಿ ಕಂಡೀತು.

ಹಳೆಬೇರು ಹೊಸ ಚಿಗುರಾಗಿ ಇಂದಿನ ಆಧುನಿಕ ಕನ್ನಡ ರಂಗಭೂಮಿ ಮತ್ತು ಸಿನೆಮಾ ಕ್ಷೇತ್ರಗಳು ಫಲ್ಲವಿಸಿ ಫಲ ಬಿಡುತ್ತಿವೆಯಾದರೂ ಇವುಗಳಿಗೆ ನೆಲೆಯೊದಗಿಸಿದ ವೃತ್ತಿ ಅಥವಾ ಕಂಪನಿ ರಂಗಭೂಮಿ ಮಾತ್ರ ‘ನಾಮಾವಶೇಷ ಎನ್ನುವಷ್ಟರ ಮಟ್ಟಿಗೆ ಬಂದು ನಿಂತಿದೆ. ಒಟ್ಟಾರೆ ರಂಗಭೂಮಿ ಗುರುತು ಹಿಡಿಯಲಾರದಷ್ಟು ಬದಲಾಗಿದೆ. ಈ ಎಲ್ಲ ವೈಪರಿತ್ಯಗಳ ಮಧ್ಯೆಯೂ ಕಂಪನಿ, ರೆಪರ್ಟರಿ, ಹವ್ಯಾಸಿ, ವೃತ್ತಿ ರಂಗಭೂಮಿ, ಸಿನೆಮಾ, ಗಾಯನ, ನೃತ್ಯ ಈ ಎಲ್ಲ ಕ್ಷೇತ್ರಗಳು ಒಟ್ಟಿಗೆ ಮೇಳೈಸಿದಂತೆ ಬಂದ ಸವಾಲುಗಳನ್ನು ಎದುರಿಸಿ ಯಶಸ್ವಿಯಾದ ಕೆಲವೇ ಕೆಲವರಲ್ಲಿ ನಾಟಕ ರತ್ನ ಗುಬ್ಬಿ ವೀರಣ್ಣನವರ ಮೊಮ್ಮಗಳಾದ ಬಿ ಜಯಶ್ರೀಯವರ ಹೆಸರು ಮುಂಚೂಣಿಯಲ್ಲಿ ನಿಲ್ಲುವುದು.

ಜಯಶ್ರೀಯವರಿಗೆ ಮೊದಲ ಪಾಠಶಾಲೆ ಮನೆಯಲ್ಲ; ರಂಗಭೂಮಿ. ತಮ್ಮ ನಾಲ್ಕನೆಯ ವಯಸ್ಸಿನಲ್ಲಿಯೇ ರಂಗಭೂಮಿಗೆ ಪಾದಾರ್ಪಣೆ ಮಾಡಿದ ಜಯಶ್ರೀ ಎನ್ ಎಸ್ ಡಿ ಪದವೀಧರೆಯೂ ಹೌದು. ಸೃಜನಾತ್ಮಕ ನಿರ್ದೇಶಕಿಯಾಗಿ, ಅಪ್ರತಿಮ ನಟಿಯಾಗಿ, ಕಂಚಿನ ಕಂಠದ ಗಾಯಕಿಯಾಗಿ, ನೃತ್ಯ ಸಂಯೋಜಕಿಯಾಗಿ, ಸಂಘಟಕಿಯಾಗಿ ರಂಗಭೂಮಿ ಮತ್ತು ಚಲನಚಿತ್ರ ಮತ್ತೀಗ ರಾಜ್ಯಸಭಾ ಸದಸ್ಯೆಯಾಗಿ ರಾಜಕೀಯ ಕ್ಷೇತ್ರದಲ್ಲೂ ತಮ್ಮದೇ ಅದ ವಿಶಿಷ್ಟ ಛಾಪು ಮೂಡಿಸಿದವರು.

ಜಯಶ್ರೀ ಕನ್ನಡ ಜನಪದ ಪರಂಪರೆಯಲ್ಲಿ ಅಡಗಿರುವ ಗತ್ತು, ಗಮ್ಮತ್ತು, ಸತ್ವ, ಆಳ-ಅಗಲಗಳನ್ನರಿತವರು. ಅದರ ಪುನರ್‌ನವೀಕರಣ ಮತ್ತು ರಂಗಸಾಧ್ಯತೆಗಳ ಅವಕಾಶಕ್ಕೆ ಅವರು ಕಂಡುಕೊಂಡ ವೇದಿಕೆ ಬೆಂಗಳೂರಿನ ‘ಸ್ಪಂದನವೆಂಬ ರಂಗಸಂಸ್ಥೆ. ಈ ಸಂಸ್ಥೆಯ ಮೂಲಕ ಕಲಾವಿದರಿಗೆ ಅಭಿನಯ, ಗಾಯನ, ನೃತ್ಯ, ವೃತ್ತಿರಂಗಭೂಮಿಯ ವೈಭವ, ರಂಜನೆ, ರಂಗಗೀತೆ, ನವನವೀನ ವಾದ್ಯಗಳ, ರಂಗತಂತ್ರಗಳ ಕುರಿತು ಕಾರ್ಯಾಗಾರಗಳನ್ನು ಏರ್ಪಡಿಸುತ್ತ ಬರುತ್ತಿದ್ದಾರೆ. ಜೊತೆಗೆ ಕನ್ನಡದ ಅನೇಕ ಕಾದಂಬರಿಗಳು, ಸಣ್ಣಕಥೆಗಳು, ಕವನಗಳನ್ನು ನಾಟಕಗಳನ್ನಾಗಿ ರೂಪಾಂತರಿಸಿ ಪ್ರದರ್ಶಿಸುವ ಪ್ರಯತ್ನವನ್ನೂ ಮಾಡುತ್ತಿದ್ದಾರೆ. ವಿಶೇಷವಾಗಿ ರಂಗಸಂಗೀತ ಮತ್ತು ಜನಪದ ಪ್ರಕಾರಗಳಾದ ಬಯಲಾಟ, ಕಿನ್ನರಿಜೋಗೇರಾಟ, ಭೂತೇರಾಟ

ಗೊಂದಲಿಗರಾಟ, ವೀರಗಾಸೆ ಮುಂತಾದವುಗಳನ್ನು ರಂಗಭೂಮಿಗೆ ಅಳವಡಿಸುವುದರ ಜೊತೆಗೆ ಅಭ್ಯಾಸ ಮಾಡಿ ದಾಖಲೀಕರಿಸಿರುವುದು ಅವರ ಮಹತ್ವದ ಸಾಧನೆಗಳಲ್ಲೊಂದು. ಕರಿಸಿರುವುದು ಅವರ ಮಹತ್ವದ ಸಾಧನೆಗಳಲ್ಲೊಂದು.

ಜಯಶ್ರೀಯವರು ಸ್ಪಂದನ ತಂಡಕ್ಕೆ ಇದುವರೆಗೆ 35 ನಾಟಕಗಳನ್ನು ನಿರ್ದೇಶಿಸಿದ್ದಾರೆ. ಅವುಗಳಲ್ಲಿ; 'ಘಾಶೀರಾಮ್ ಕೊತ್ವಾಲ್, ಜಸ್ಮಾ ಓಢನ್, ಬ್ಲಾಕ್‌ಬೆಟ್, ಕರಿಮಾಯಿ, ನಹಿ ನಹಿ ರಕ್ಷತಿ, ಬ್ಯಾರಿಸ್ಟರ್, ನೀಲಿಕುದುರೆ, ಲಕ್ಷಾಪತಿ ರಾಜನ ಕಥೆ, ನಾಗಮಂಡಲ, ಸಿರಿಸಂಪಿಗೆ, ಅಗ್ನಿಪಥ, ಉರಿಯ ಉಯ್ಯಾಲೆ, ಚಿತ್ರಪಟ, ಸ್ಮಶಾನ ಕುರುಕ್ಷೇತ್ರ, ಮಂಥರಾ, ಗಿರಿಜಾ ಕಲ್ಯಾಣ, ಸದಾರಮೆ, ಬಾಳೂರ ಗುಡಿಕಾರ ಮುಂತಾದವು ಮುಖ್ಯವಾದವು. ಇವುಗಳಲ್ಲಿ ಕೆಲ ನಾಟಕಗಳು ಭಾರತದಲ್ಲಷ್ಟೇ ಅಲ್ಲದೆ ಈಜಿಪ್ಟ್, ರಷ್ಯ, ಕೈರೋ, ತಾಷ್ಕೆಂಟ್, ಎಡಿನ್‌ಬರೋ, ಸ್ವೀಡನ್ ಮುಂತಾದ ದೇಶ-ವಿದೇಶದ ಪ್ರಮುಖ ನಗರಗಳಲ್ಲೂ ಪ್ರದರ್ಶನ ಕಂಡು ಮೆಚ್ಚುಗೆ ಪಡೆದಿವೆ.

ಕರ್ನಾಟಕದ ಪ್ರಸಿದ್ಧ ನಾಟಕ ತಂಡಗಳಾದ ಶಿವಸಂಚಾರ, ತರಳಬಾಳು ಕಲಾಸಂಘ, ಬೆನಕ, ನಟರಂಗ, ರಂಗಸಂಪದ ಮತ್ತು ಕಲಾಗಂಗೋತ್ರಿ ಮುಂತಾದ ನಾಟಕ ತಂಡಗಳಿಗೆ ನಾಟಕ ನಿರ್ದೇಶಿಸಿದ್ದಾರೆ. ಅವುಗಳಲ್ಲಿ 'ತಾಯಿ, ಜೋಕುಮಾರಸ್ವಾಮಿ, ಟೆಂಗರ ಬುಡ್ಡಣ್ಣ, ಅಂತಿಮಯಾತ್ರೆ, ಬ್ಯಾರಿಸ್ಟರ್, ಕರಿಮಾಯಿ, ಲಕ್ಷಾಪತಿರಾಜನ ಕಥೆ, ಅಗ್ನಿಪಥ, ಚಿತ್ರಪಟ, ಮಂಥರ, ಸದಾರಮೆ, ಬಾಳಭಿಕ್ಷುಕ ಮುಂತಾದವು ಪ್ರಮುಖವಾದವು. ಹೂವಿ ನಾಟಕವನ್ನು ಅಮೆರಿಕೆಯ **ICHF** ಡಲಾಸ್ ತಂಡಕ್ಕೆ ಇಂಗ್ಲೀಷಿನಲ್ಲಿ ನಿರ್ದೇಶನ ಮಾಡಿದ್ದಾರೆ. ಪೋರ್ಡ್ ಪೌಂಡೇಷನ್ ಅನುದಾನದ ಅಡಿಯಲ್ಲಿ ಕರ್ನಾಟಕದ ಅಪರೂಪದ ಜನಪದ ಪ್ರಕಾರಗಳನ್ನು ಮೂಲರೂಪದಲ್ಲಿ ಅಭ್ಯಾಸ ಮಾಡಿ, ನಾಟಕಗಳಿಗೆ ಅಳವಡಿಸುವ ಪ್ರಯತ್ನದ ಫಲವಾಗಿ ಮೂಡಿಬಂದಂಥವು ಅಗ್ನಿಪಥ (ಗೊಂದಲಿಗರಾಟ ಆಧಾರಿತ), ಸಿರಿಸಂಪಿಗೆ (ಸಮರ ಕಲೆಯಾಧಾರಿತ), ಚಿತ್ರಪಟ (ಭೂತೇರಾಟ ಆಧಾರಿತ) ನಾಟಕಗಳು.

ಕಳೆದ 5 ದಶಕಗಳ ರಂಗಭೂಮಿಯ ಪ್ರತೀಕವಾಗಿ ನಿಂತಿರುವ ಜಯಶ್ರೀಯವರು ಇದುವರೆಗೆ ವಸ್ತು, ವಿಷಯ, ವಿನ್ಯಾಸ, ರಂಗತಂತ್ರಗಳಲ್ಲಿ ಒಂದಕ್ಕಿಂತ ಒಂದು ಭಿನ್ನವಾಗಿರುವ ಸುಮಾರು 50 ಕ್ಕೂ ಹೆಚ್ಚಿನ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಅಲ್ಲದೆ ಹಲವು ನಾಟಕಗಳಲ್ಲಿ ಸ್ವತಃ ಪಾತ್ರಗಳನ್ನೂ ನಿರ್ವಹಿಸಿದ್ದಾರೆ. ಈ ಮೂಲಕ ಕನ್ನಡ ರಂಗಭೂಮಿಗೆ ನುರಿತ ಕಲಾವಿದರು, ಗಾಯಕರು, ತಂತ್ರಜ್ಞರು ಹಾಗೂ ನಿರ್ದೇಶಕರನ್ನು ನೀಡುವುದರ ಜೊತೆಗೆ ಹೊಸ ಹೊಸ ರಂಗ ಸಾಧ್ಯತೆಗಳನ್ನು ತೋರಿಸಿಕೊಟ್ಟಿದ್ದಾರೆ.

ಜಯಶ್ರೀಯವರು ಬೆಂಗಳೂರಿನ ಎನ್‌ಎಸ್‌ಡಿಯ ರಿಜನಲ್ ರಿಸೋರ್ಸ್ ಸೆಂಟರ್‌ನ ನಿರ್ದೇಶಕಿಯಾಗಿ, ಸಂಗೀತ ನಾಟಕ ಅಕಾಡಮಿ, ರಾಷ್ಟ್ರೀಯ ನಾಟಕ ಶಾಲೆ ನವದೆಹಲಿ, ಕರ್ನಾಟಕ ನಾಟಕ ಅಕಾಡಮಿಯ ಸದಸ್ಯರಾಗಿಯಲ್ಲದೆ ಹಲವಾರು ಸರಕಾರೇತರ ಸಂಘಸಂಸ್ಥೆಗಳ ಸದಸ್ಯರಾಗಿ, ನಿರ್ದೇಶಕರಾಗಿ,

ಮಾರ್ಗದರ್ಶಕರಾಗಿ ಸೇವೆಸಲ್ಲಿಸುವುದರ ಮೂಲಕ ರಂಗಭೂಮಿಯಲ್ಲಿನ ತಮ್ಮ ಸಮಗ್ರ ಅನುಭವವನ್ನು ವಿಶ್ವರಂಗಭೂಮಿಗೆ ಧಾರೆಯೆರೆದಿದ್ದಾರೆ.

ಜಯಶ್ರೀಯವರು ರಂಗಭೂಮಿ ಮತ್ತು ಸಿನಿಮಾ ಕ್ಷೇತ್ರಕ್ಕೆ ನೀಡಿದ ಈ ಎಲ್ಲ ಅಪಾರ ಕೊಡುಗೆಯನ್ನು ಗುರುತಿಸಿ ಸಂಘ-ಸಂಸ್ಥೆ, ಸರಕಾರಗಳು ನೀಡಿದ ಪ್ರಶಸ್ತಿ ಪುರಸ್ಕಾರಗಳು ಹತ್ತು ಹಲವು. ಅವುಗಳಲ್ಲಿ; ಮೈಸೂರು ಮುಕ್ತ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಉತ್ತರ ಪ್ರದೇಶದ ಸಫ್ದರ್ ಹಷ್ಮಿ ಪುರಸ್ಕಾರ, ಕರ್ನಾಟಕ ನಾಟಕ ಅಕಾಡಮಿಯ 'ಅಕಾಡೆಮಿ ಪ್ರಶಸ್ತಿ, ಆರ್ಯಭಟಪ್ರಶಸ್ತಿ, ಉದಯ ಟಿವಿಯ 'ಅತ್ಯುತ್ತಮ ಹಿನ್ನಲೆ ಗಾಯಕಿ ಪ್ರಶಸ್ತಿ, ನಾಕೌಟ್ ಪ್ರಶಸ್ತಿ, 'ಕೇಂದ್ರ ಸಂಗೀತ ನಾಟಕ ಅಕಾಡಮಿಯ ಪ್ರಶಸ್ತಿ, ಸಂದೇಶ್ ಪ್ರಶಸಿ, 'ಕರ್ನಾಟಕ ಎಕ್ಸಲೆನ್ಸ್ ಪ್ರಶಸ್ತಿ, ಕಲ್ಪನಾ ಚಾವ್ಲಾ ಪ್ರಶಸಿ, ನಾಗಮಂಡಲ ಚಿತ್ರದಲ್ಲಿನ ಅಭಿನಯಕ್ಕಾಗಿ ಅತ್ಯುತ್ತಮ ಪೋಷಕ ನಟಿ ಪ್ರಶಸಿ, ಆಳ್ವಾಸ್ ಸಿರಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಬಿ ವಿ ಕಾರಂತ ಸ್ಮೃತಿ ಸಮ್ಮಾನ್, 'ಎಸ್ಸೆಲ್ ಕರ್ನಾಟಕಾಸ್ ಬೆಸ್ಟ್ ಆರ್ಟ್ ಅಂಡ್ ಕಲ್ಚರ್ ಪ್ರಶಸ್ತಿ ಇತ್ತೀಚೆಗೆ ಅಬುದಾಬಿಯಲ್ಲಿ ನಡೆದ ಅಂತರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಅತ್ಯತ್ತಮ ನಟಿಗೆ ಸಲ್ಲುವ ಬ್ಲಾಕ್ ಪರೇಲ್ ಪ್ರಶಸ್ತಿಯೂ ಸೇರಿದಂತೆ ಹತ್ತು ಹಲವು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

ಶ್ರೀ ಶಿವಕುಮಾರ ಕಲಾಸಂಘವು ರಂಗಭೂಮಿಯಲ್ಲಿನ ಜೀವಮಾನದ ಸಾಧನೆಯನ್ನು ಗುರುತಿಸಿ ಕೊಡಮಾಡುವ ಪ್ರತಿಷ್ಠಿತ 'ಶ್ರೀ ಶಿವಕುಮಾರ ಪ್ರಶಸ್ತಿ ಇದೀಗ ಡಾ|| ಬಿ ಜಯಶ್ರೀಯವರ ಮುಡಿಗೇರಿರುವುದು ಅವರ ಕಲಾ ಸಾಧನೆಗೇ ಕಲಶವಿಟ್ಟಂತಾಗಿದೆ.

**ಹೆಚ್ ಎಸ್ ದ್ಯಾಮೇಶ್**

**ಶ್ರೀವಾಣಿ**

ರಂಗಭೂಮಿಗೆ ಎಂದೂ ಸಾವಿಲ್ಲ. ಕಾರಣ 'ರಂಗ'ದ ಜೊತೆಗೆ ಅಂಟಿಕೊಂಡಿರುವುದು 'ಭೂಮಿ'. ಭೂಮಿ ಕೆಲವೊಮ್ಮೆ ಸತ್ವ ಕಳೆದುಕೊಂಡು ಬರಡಾಗಬಹುದು. ಅತಿವೃಷ್ಠಿ, ಅನಾವೃಷ್ಟಿಯಿಂದ ನಿರೀಕ್ಷಿತ ಫಲ ದೊರೆಯದಿರಬಹುದು. ಹೆಚ್ಚು ನೀರು ನಿಂತು ಭೂಮಿ ಉಪ್ಪಡರಿ ಸತ್ವಹೀನವಾಗಬಹುದು. ಹಾಗಂತ ಅದೇನೂ ಬಂಜೆಯಾಗದು. ಸಾವನ್ನು ಬರಮಾಡಿಕೊಳ್ಳದು. ಕೃಷಿಕ ಶ್ರಮವಹಿಸಿ ಅದಕ್ಕೆ ಹೊಸ ಮಣ್ಣು, ಗೊಬ್ಬರ ಹಾಕಿ ಕಾಲ ಕಾಲಕ್ಕೆ ಸರಿಯಾಗಿ ಉತ್ತು, ಬೀಜ ಬಿತ್ತಿ, ರಕ್ಷಣೆ ನೀಡಿ, ಕಳೆ-ಕಸ ತೆಗೆಯುತ್ತ ಜೋಪಾನ ಮಾಡಿದರೆ ಅದು ಅವನ ಶ್ರಮಕ್ಕೆ ತಕ್ಕ ಫಲ ಕೊಡುವುದು. ಬರಡುಭೂಮಿ ಫಲವತ್ತಾದ ಭೂಮಿಯಾಗಿ ಯಾರೂ ನಿರೀಕ್ಷಿಸದಷ್ಟು ಫಲ ನೀಡುವುದು. ಇಲ್ಲಿ ತಪ್ಪು ಭೂಮಿಯದಲ್ಲ. ಆ ಭೂಮಿಯ ಬಳಕೆಯನ್ನು ಯಾರು ಹೇಗೆ ಮಾಡಿಕೊಳ್ಳುವರೆಂಬುದು ಮುಖ್ಯ. ಹಾಗಾಗಿ ಭೂಮಿ ಎಂದಿಗೂ ಬಂಜೆಯಲ್ಲ. ಅದಕ್ಕೆ ಸಾವಿಲ್ಲ. ಬದಲಾಗಿ ಸ್ವಲ್ಪ ಕಾಲ ಸೊರಗಿದಂತೆ ಕಾಣಬಹುದಷ್ಟೇ. ಇದೇ ಮಾತನ್ನು ರಂಗಭೂಮಿಗೂ ಅನ್ವಯಿಸಬಹುದು.

ಕನ್ನಡ ರಂಗಭೂಮಿಗೆ ತನ್ನದೇ ಆದ ಇತಿಹಾಸವಿದೆ. ಹಿಂದೆ ಅನೇಕ ಕಂಪನಿಗಳು ಹುಟ್ಟಿಕೊಂಡು ಸದಾ ಜಂಗಮತ್ವ ಉಳಿಸಿಕೊಂಡು ರಂಗದ ಮೂಲಕ ಸಾಮಾಜಿಕ ಜಾಗೃತಿಯನ್ನು ಮಾಡುತ್ತಿದ್ದುದು ಸುಳ್ಳೇನಲ್ಲ. ಬಾಲ್ಯದಲ್ಲಿ ನಾವು ನೋಡಿದ ಹಲವು ಕಂಪನಿ ನಾಟಕಗಳ ಪ್ರಭಾವ ಇನ್ನೂ ನಮ್ಮ ಮನದಲ್ಲಿ ಹಸಿರಾಗಿದೆ. ಆ ನಾಟಕಗಳನ್ನು ಆಡಿದ್ದು ಯಾವ ಕಂಪನಿ ಎನ್ನುವುದು ನಮ್ಮ ನೆನಪಿನಲ್ಲಿ ಇಲ್ಲ. ಆದರೆ ಆ ಕಂಪನಿಯ ಕಲಾವಿದರ ಅಭಿನಯ, ದೃಶ್ಯ ವೈಭವ, ಸಂಗೀತದ ನಿನಾದ ನಮ್ಮನ್ನು ಭ್ರಮಾಲೋಕಕ್ಕೆ ಕರೆದುಕೊಂಡು ಹೋಗಿದ್ದುಂಟು. ಮೊದಲಿಗೆ ನಾವು ನೋಡಿದ್ದು 'ಲವ-ಕುಶ' ನಾಟಕ. ಇಬ್ಬರು ಚಿಕ್ಕ ಬಾಲಕಿಯರು 'ಲವ-ಕುಶ'ನಾಗಿ ಅಭಿನಯಿಸಿದ ರೀತಿ ಎಂಥವರನ್ನೂ ಬೆರಗುಗೊಳಿಸುವಂತೆ ಇತ್ತು. ಅವರ ಮಾತಿನ ಮಾಧುರ್ಯ, ಬಿಲ್ಲು ಹಿಡಿದು ಹೋರಾಡುವ ವಿಧಾನ, ಹಾಡುವ ಶೈಲಿ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿ ಆ ರಂಗಮಂದಿರದಿಂದ ಹೊರ ಹೋಗಲು ಬಿಡುತ್ತಿರಲಿಲ್ಲ. ಅಂಥದೇ ಮತ್ತೊಂದು ನಾಟಕ 'ಸತ್ಯ ಹರಿಶ್ಚಂದ್ರ'. ಇಂದಿನ ಕಂಪನಿ ನಾಟಕಗಳಲ್ಲಿ ಆ ವೈಭವ, ಗಟ್ಟಿತನ, ಮೋಡಿ ಮಾಡುವ ಗುಣವನ್ನು ಕಾಣುವುದು ತುಂಬಾ ವಿರಳ.

ಗುಬ್ಬಿ ಕಂಪನಿಯ ನಾಟಕಗಳನ್ನು ನೋಡಿದ ನೆನಪು ಮನದಲ್ಲಿ ಎಲ್ಲೋ ಹಸಿ ಹಸಿಯಾಗಿದೆ. ಗುಬ್ಬಿ ವೀರಣ್ಣನವರ ಮೊಮ್ಮಗಳು ಬಿ ಜಯಶ್ರೀ. ಚಿಕ್ಕ ಬಾಲಕಿಯಾಗಿದ್ದಾಗಲೇ ರಂಗದ ಗೀಳು ಬೆಳೆಸಿಕೊಂಡವಳು. ಮನೆಯಲ್ಲಿ ಎಲ್ಲರೂ ಕಲಾವಿದರೇ ಆಗಿದ್ದರಿಂದ ಸಹಜವಾಗಿ ಜಯಶ್ರೀಯವರೂ ಕಲಾವಿದೆ ಆಗಿರುವುದರಲ್ಲಿ ಅಂಥ ವಿಶೇಷವೇನಿಲ್ಲ ಎನ್ನಿಸಬಹುದು. ಆದರೆ ಮುಂದೆ ಕಂಪನಿಗಳೆಲ್ಲ ಆರ್ಥಿಕ ಸಂಕಷ್ಟದಿಂದ ಮುಚ್ಚುವ ಪರಿಸ್ಥಿತಿ ಬಂದಾಗ ಈ ನಾಟಕದ ಸಹವಾಸವೇ ಬೇಡವೆಂದು ಹಲವರು ಬೇರೆ ಉದ್ಯೋಗ ಹುಡುಕಿಕೊಂಡು ನೆಮ್ಮದಿಯ ಜೀವನ ನಡೆಸಲು ಮುಂದಾದರೆ ಜಯಶ್ರೀಯವರು ರಂಗಭೂಮಿಯನ್ನೇ ತಮ್ಮ ಹಾಸಿಗೆ, ಹೊದಿಕೆಯನ್ನಾಗಿಸಿಕೊಂಡರು. ವೃತ್ತಿಯ ಜೊತೆಗೆ ಹವ್ಯಾಸಿತನವನ್ನೂ ಮೈಗೂಡಿಸಿಕೊಂಡರು. ಅದಕ್ಕಾಗಿ ದೆಹಲಿಯ ಎನ್ ಎಸ್ ಡಿ ಸೇರಿ ರಂಗದ ಬಗ್ಗೆ ಮತ್ತಷ್ಟು ಅರಿವು ಮೂಡಿಸಿಕೊಂಡರು. ಕಾಲಕ್ರಮೇಣ ಗುಬ್ಬಿ ಕಂಪನಿ ಮರೆಯಾದರೂ ಆ ಕಂಪನಿಯ ಪರಂಪರೆಯನ್ನು ಉಳಿಸುವ ಕಾರ್ಯವನ್ನು ಜಯಶ್ರೀಯವರು ಮಾಡಿದ್ದು ಯಾರಾದರೂ ಮೆಚ್ಚಲೇಬೇಕಾದ ಸಂಗತಿ.

ನಾವು ಜಯಶ್ರೀಯವರ ಹೆಸರು ಕೇಳಿದ್ದೆವಾದರೂ ಅವರನ್ನು ನೋಡಿರಲಿಲ್ಲ. 'ಶಿವಸಂಚಾರ' ಪ್ರಾರಂಭವಾದದ್ದು 1997. ಆ ವರ್ಷ ಅಶೋಕ ಬಾದರದಿನ್ನಿ, ಸಿಜಿಕೆ, ವೈ ಡಿ ಬದಾಮಿ ಕ್ರಮವಾಗಿ 'ಮಹಾಬೆಳಗು, ಶೋಕಚಕ್ರ, ಉರಿಲಿಂಗಪೆದ್ದಿ' ನಾಟಕಗಳನ್ನು ನಿರ್ದೇಶಿಸಿದರು. ಆ ನಾಟಕಗಳ ಯಶಸ್ಸು ಮತ್ತೆ ಶಿವಸಂಚಾರ ತನ್ನ ಯಾನವನ್ನು ಮರುವರ್ಷವೂ ಮುಂದುವರಿಸುವಂತೆ ಮಾಡಿತು. ಎರಡನೆಯ ವರ್ಷದ ನಾಟಕ ನಿರ್ದೇಶನದ ಜವಾಬ್ದಾರಿಯನ್ನು ಯಾರಿಗೆ ವಹಿಸುವುದು ಎಂದು 'ಸಿಜಿಕೆ' ಅವರೊಂದಿಗೆ ಸಮಾಲೋಚಿಸಿದಾಗ ಸಿ ಬಸವಲಿಂಗಯ್ಯ ಮತ್ತು ಬಿ ಜಯಶ್ರೀ ಅವರನ್ನು ಕೇಳಿಕೊಳ್ಳೋಣ ಎಂದರು. ಬಸವಲಿಂಗಯ್ಯನವರು ಮಠದ ಪರಿಸರಕ್ಕೆ ಬರಲೊಪ್ಪದೆ 'ಈಡಿಪಸ್' ನಾಟಕ ನಿರ್ದೇಶಿಸಲು ಅವಕಾಶವಿದ್ದರೆ ಮಾತ್ರ ಬರುವೆ ಎಂದು ಶರತ್ತು ಹಾಕಿದರು. ಆಗಬಹುದು ಎಂದು ನಾವು ಒಪ್ಪಿಗೆ ಸೂಚಿಸಿದಾಗ ಉಪಾಯಗಾಣದೆ ಅವರು ಆ ನಾಟಕವನ್ನು

ನಿರ್ದೇಶಿಸಲು ಒಪ್ಪಿ ಸಾಣೇಹಳ್ಳಿಗೆ ಬಂದರು. ಜಯಶ್ರೀಯವರು ಯಾವ ಶರತ್ತನ್ನೂ ಹಾಕದೆ ತುಂಬಾ ಖುಷಿಯಿಂದಲೇ ಸಾಣೇಹಳ್ಳಿಗೆ ಬಂದರು.

ನಗರ ಪ್ರದೇಶದಲ್ಲಿದ್ದ ಜಯಶ್ರೀಯವರಿಗೆ ಸಾಣೇಹಳ್ಳಿಯ ಪರಿಸರ ತುಂಬಾ ಖುಷಿ ಕೊಟ್ಟಂತೆ ಕಂಡಿತು. ಪ್ರತಿದಿನ ಬೆಳಗ್ಗೆ ನಮ್ಮ ಹಾಸ್ಟೆಲ್ ವಿದ್ಯಾರ್ಥಿಗಳು ಪ್ರಾರ್ಥನೆ ಮಾಡುವುದು, ವಚನಗಳನ್ನು ಹಾಡುವುದು, ಹಕ್ಕಿಗಳಂತೆ ಸ್ವತಂತ್ರವಾಗಿ ಓಡಾಡುವುದು ಅವರ ಮನದ ಮೇಲೆ ಪರಿಣಾಮ ಬೀರಿ ಇದು ನನಗೆ 'ತವರು ಮನೆ' ಇದ್ದಂತೆ ಎನ್ನುವ ಭಾವನೆ ಬೆಳಸಿಕೊಂಡರು. ಅನೇಕ ನಿರ್ದೇಶಕರು ಸ್ವಾಮಿಗಳ ಬಳಿ ಬರಲು, ಅವರೊಂದಿಗೆ ಮಾತನಾಡಲು ಇಷ್ಟಪಡುವುದಿಲ್ಲ. ಕಾರಣ ತಾವು ಪ್ರಗತಿಪರರು, ವಿಚಾರವಾದಿಗಳು, ಜ್ಞಾನಿಗಳು ಎನ್ನುವುದರ ಜೊತೆಗೆ ಸ್ವಾಮಿಗಳೆಂದರೆ ಅಂಧಾನುಕರಣೆಯ ದಾಸರು, ವಿಚಾರವಂತಿಕೆಯಿಂದ ಹೊರತಾದವರು, ಭಕ್ತರು ನಮಸ್ಕಾರ ಮಾಡಲೆಂದೇ ಸದಾ ಕಾಲು ಚಾಚಿಕೊಂಡು ಕೂರುವವರು ಎನ್ನುವ ತಪ್ಪು ಕಲ್ಪನೆ. ಆದರೆ ಜಯಶ್ರೀಯವರು ನಮ್ಮೊಂದಿಗೆ ಅತ್ಯಂತ ಭಕ್ತಿ ಗೌರವದಿಂದ ಮಾತನಾಡುತ್ತಿದ್ದರು. ಅವರೊಂದಿಗೆ ಮಾತನಾಡುವಾಗ ಹೊಸ ಪರಿಚಯ ಎಂದು ನಮಗೆ ಅನ್ನಿಸಲೇ ಇಲ್ಲ. ಬಹುದಿನಗಳ ಸಂಬಂಧವಿತ್ತೇನೋ ಎನ್ನುವ ಭಾವನೆ ಬರುತ್ತಿತ್ತು. ಅವರು ಮುದೇನೂರು ಸಂಗಣ್ಣನವರ 'ಬಾಳ ಭಿಕ್ಷುಕ' ನಾಟಕವನ್ನು ಶಿವಸಂಚಾರದ ಕಲಾವಿದರಿಗೆ ಕಲಿಸಿದರು.

ಜಯಶ್ರೀ ಅವರದು ಕಂಚಿನ ಕಂಠ. ಅವರ ಮಾತುಗಳಿಗಿಂತ ಹಾಡು ಕೇಳುವುದೇ ಹೆಚ್ಚು ಖುಷಿ. ಬಾಳ ಭಿಕ್ಷುಕ ನಾಟಕವನ್ನು ಜಾನಪದೀಯ ಶೈಲಿಯಲ್ಲಿ ಕಲಿಸಿ ಅದಕ್ಕೆ ಸಂಗೀತವನ್ನು ಅಳವಡಿಸಿದ್ದು ಎಲ್ಲ ಪ್ರೇಕ್ಷಕರ ಮನಸ್ಸನ್ನು ಸೂರೆಗೊಳ್ಳುವಲ್ಲಿ ಯಶಸ್ವಿಯಾಯಿತು. ನಾಟಕ ಸುಮಾರು 50 ಪ್ರಯೋಗಗಳನ್ನು ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಕಂಡಿತು. ಅಲ್ಲಿಂದ ಮುಂದೆ ಜಯಶ್ರೀಯವರು ಸಾಣೇಹಳ್ಳಿಯ ಒಂದು ಭಾಗವೇ ಆದಂತಿದ್ದರು. ನಮ್ಮ ಅನೇಕ ಸಮಾರಂಭಗಳಲ್ಲಿ ಭಾಗವಹಿಸಿದ್ದರೂ ಅವರು ಮಾತನಾಡಿದ್ದಕ್ಕಿಂತ ಹಾಡಿದ್ದೇ ಹೆಚ್ಚು. ಅವರು ರಂಗದ ಮೇಲೆ ನಿಂತು ಹಾಡುತ್ತಿದ್ದರೆ ಮತ್ತೆ ಮತ್ತೆ ಆ ಧ್ವನಿಯ ಮಾಧುರ್ಯವನ್ನು ಸವಿಯುವ ಬಯಕೆ ಪ್ರೇಕ್ಷಕರಲ್ಲಿ ಹುಟ್ಟುತ್ತಿತ್ತು. ಅಂಥ ಮಹಾನ್ ಕಲಾವಿದೆ ಜಯಶ್ರೀಯವರು. ವೃತ್ತಿ ಮತ್ತು ಹವ್ಯಾಸಿತನವನ್ನು ಮೇಳೈಸಿಕೊಂಡು ನಾಟಕಕ್ಕೆ ಹೊಸ ರೂಪವನ್ನು ಕೊಡುವ ಪ್ರತಿಭೆ ಅವರದು. ಚಲನಚಿತ್ರ ನಟಿಯಾಗಿ, ರಂಗನಿರ್ದೇಶಕಿಯಾಗಿ, ರಂಗಸಂಘಟಕಿಯಾಗಿ, ಏಕವ್ಯಕ್ತಿ ಪ್ರದರ್ಶನದ ಮೂಲಕ ಹಿಂದಿನಿಂದ ಇಂದಿನವರೆಗಿನ ರಂಗವೈಭವವನ್ನು ಅವರು ಕಟ್ಟಿಕೊಡುವ ರೀತಿ ಅನನ್ಯವಾದುದು. ಅಂಥ ಪ್ರತಿಭಾನ್ವಿತ ಕಲಾವಿದೆಗೆ ಈ ವರ್ಷ ಶ್ರೀ ಶಿವಕುಮಾರ ಪ್ರಶಸ್ತಿ ಅರಸಿಕೊಂಡು ಬಂದದ್ದು ಪ್ರಶಸ್ತಿಗೆ ಮತ್ತಷ್ಟು ಗೌರವ ಬಂದಂತಾಗಿದೆ. ಅವರಿಗೆ ಇನ್ನೂ ಹೆಚ್ಚಿನ ಪ್ರಶಸ್ತಿಗಳು ಬರುವಲ್ಲಿ ನಮ್ಮ ಪ್ರಶಸ್ತಿ ಮೆಟ್ಟಿಲಾಗಲಿ,. ಕನ್ನಡ ರಂಗಭೂಮಿಗೆ ಆ ತಾಯಿಯಿಂದ ಅಪಾರ ಕಾಣಿಕೆ ಇನ್ನುಮುಂದೆಯೂ ಸಲ್ಲುವಂತಾಗಲಿ ಎನ್ನುವುದೇ ನಮ್ಮ ಬಯಕೆ ಮತ್ತು ಹಾರೈಕೆ.

ಸಾಣೇಹಳ್ಳಿ - ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು

31-10-2011

ಪ್ರಶಸ್ತಿ ಆಯ್ಕೆ ಸಮಿತಿ:

ಅಧ್ಯಕ್ಷರು: ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರು

ಸದಸ್ಯರು: ಸಿ ಬಸವಲಿಂಗಯ್ಯ, ವಿಶ್ವೇಶ್ವರಿ ಬಸವಲಿಂಗಯ್ಯ ಹಿರೇಮಠ,

ಲೋಕೇಶ ಅಗಸನಕಟ್ಟೆ, ಹೆಚ್ ಎಸ್ ದ್ಯಾಮೇಶ್

ಈ ಹಿಂದಿನ ಪ್ರಶಸ್ತಿ ಪುರಸ್ಕೃತರು:

1. ಪ್ರಸನ್ನ (2004) , 2. ಸಿಜಿಕೆ (2005)

3. ಪಿ ಜಿ ಗಂಗಾಧರ ಸ್ವಾಮಿ (2006), 4. ಅಶೋಕ ಬಾದರದಿನ್ನಿ (2007)

5. ಮಾಲತಿಶ್ರೀ (2008) (2009 ರಲ್ಲಿ ಅತಿವೃಷ್ಟಿಯ ಕಾರಣ ಪ್ರಶಸ್ತಿಯನ್ನು ರದ್ದುಗೊಳಿಸಲಾಗಿತ್ತು)

6. ಸಿ ಬಸವಲಿಂಗಯ್ಯ (2010)